ಉ) ಉಳಿದಿರುವ 95 ಹದ್ದುಬಸ್ತು ಅರ್ಜಿಗಳ ಅಳತೆ ಕೆಲಸವನ್ನು ಶೀಘ್ರವಾಗಿ ಮಾಡಿ ಪೂರೈಸಲಾಗುವುದು.

ತುರುವೇಕೆರೆ ತಾಲ್ಲೂಕಿನಲ್ಲಿ ನಿವೇಶನ ರಹಿತರಿಗೆ ನಿವೇಶನ ಒದಗಿಸುವುದು

2242 (2662) ಶ್ರೀ ಲಕ್ಷ್ಮೀನಾರಾಯಣ ಎಂ.ಡಿ. (ಅಣ್ಣಯ್ಯ) (ತುರುವೇಕೆರೆ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತುರುವೇಕೆರೆ ತಾಲ್ಲೂಕಿನಲ್ಲಿ ನಿವೇಶನ ರಹಿತರಿಗೆ ನಿವೇಶನ ಕೊಡಲು ಆಶ್ರಯ ಕಮಿಟಿಯಿಂದ ಸರ್ಕಾರಿ ಸರ್ವೆ ನಂ. ಗಳ ಅನೇಕ ಹಳ್ಳಿಗಳನ್ನು ಗುರುತಿಸಿ ಸರ್ಕಾರಕ್ಕೆ ಕಳುಹಿಸಿರುವುದು ನಿಜವೇ; ಅವು ಯಾವುವು;

ಆ) ಹಾಗಿದ್ದಲ್ಲಿ, ಈ ಹಳ್ಳಿಗಳ ಸರ್ವೆ ನಂ. ಜಾಗವನ್ನು ಆಶ್ರಯ ಕಮಿಟಿಗೆ ವರ್ಗಾಯಿಸದಿರಲು ಕಾರಣವೇನು;

ಇ) ಕಳೆದ ಮೂರು ವರ್ಷಗಳಿಂದ ಒಂದು ಹಳ್ಳಿಗೂ ಜಾಗವನ್ನು ಕೊಡದೇ ಬರೀ ಸುಳ್ಳು ಹೇಳಿಕೆ ಕೊಡುತ್ತಿರುವುದು ಹಾಸ್ಯಾಸ್ಪದವಲ್ಲವೇ;

ಈ) ಈಗಲಾದರೂ ಸರ್ವೆ ನಂ. ಜಾಗವನ್ನು ಸೈಟ್‌ಗಳಿಗೆ ಕಾದಿರಿಸಿ ತಕ್ಷಣ ಆದೇಶ ಮಾಡಿ ನಿವೇಶನ ರಹಿತ ಜನರಿಗೆ ಅನುಕೂಲ ಮಾಡಲಾಗುವುದೆ?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು):

ಅ) ಈ ಕೆಳಕಂಡ 5 ಗ್ರಾಮಗಳ ಸರ್ಕಾರಿ ನಂಬರ್‌ಗಳಲ್ಲಿ ನಿವೇಶನ ಕೊಡಲು ಸರ್ಕಾರಕ್ಕೆ ಪ್ರಸ್ತಾವನೆಗಳು ಬಂದಿವೆ.

ಕ್ರ. ಸಂ.	ಗ್ರಾಮ	ಪ್ರಸ್ತಾವನೆ ದಿನಾಂಕ
1.	ಹೆಗ್ಗೆರೆ	2-12-2002
2.	ಸಂಪಿಗೆ	2-12-2002
3.	ಹಡವನಹಳ್ಳಿ	2-12-2002
4.	ಚಿಕ್ಕತುರುವೇಕೆರೆ	3-12-2002
5.	ಹಳ್ಳಿಹೊಸಹಳ್ಳಿ	14-02-2002

ಆ) ಸಂಪಿಗೆ ಹಾಗೂ ಹೆಗ್ಗೆರೆ ಗ್ರಾಮಗಳ ಪ್ರಸ್ತಾವನೆಗಳಿಗೆ ದಿನಾಂಕ 17-2-2003, 13-3-2003 ರಂದು ಕ್ರಮವಾಗಿ ಸರ್ಕಾರದ ಅನುಮೋದನೆ ನೀಡಲಾಗಿದೆ. ಇನ್ನುಳಿದ ಮೂರು ಗ್ರಾಮಗಳ ಪ್ರಸ್ತಾವನೆಗಳು ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಮೂರು ವರ್ಷಗಳಿಂದ ಸರ್ಕಾರದಲ್ಲಿ ಪ್ರಸ್ತಾವನೆಗಳು ಬಾಕಿ ಇಲ್ಲ.

ಈ) ತ್ವರಿತವಾಗಿ ನಿಯಮಾನುಸಾರ ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳಲಾಗುವುದು.

ಹುಣಸೂರು ತಾಲ್ಲೂಕಿನ ಪುರಾತನ ದೇವಾಲಯಗಳು

2243 (2663) ಶ್ರೀ ಪಾಪಣ್ಣ ವಿ. (ಹುಣಸೂರು): ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹುಣಸೂರು ತಾಲ್ಲೂಕಿನ ಪುರಾತನ ದೇವಾಲಯಗಳು ಎಷ್ಟಿವೆ; ಸವಿವರ ನೀಡುವಿರಾ;

ಆ) ಈ ಪುರಾತನ ದೇವಾಲಯಗಳ ಜೀರ್ಣೋದ್ಧಾರಕ್ಕಾಗಿ ಸರ್ಕಾರ ಕೈಗೊಂಡಿರುವ ಕಾರ್ಯಕ್ರಮವೇನು;